ವಿವರ:

1) ಎ - ಗುಂಪು : ಬಜಾರ್ ಡ್ರಗ್ಸ್
2) ಬಿ - ಗುಂಪು : ಸಾಂಬಾರ್ ವಸ್ತುಗಳು
3) ಸಿ - ಗುಂಪು : ಯುನಾನಿ ವಿಶೇಷ ಔಷಧಿ ದ್ರವ್ಯಗಳು
4) ಡಿ - ಗುಂಪು : ಹಸಿರು ಔಷಧ ದ್ರವ್ಯಗಳು
5) ಇ - ಗುಂಪು : ಪ್ಯಾಕಿಂಗ್ ಪದಾರ್ಥಗಳು
6) ಎಫ್ - ಗುಂಪು : ಫಾರ್ಮಸಿ ಪರಿಕರಗಳು
7) ಜಿ - ಗುಂಪು : ಜೀನುತುಪ್ಪ ಮತ್ತು ಜೀನುಮೇಣ.

ಔಷಧಿಗಾಗಿ ಕಚ್ಚಾ ವಸ್ತು ಟೆಂಡರ್‌ನಲ್ಲಿ ಮೋಸ.

819(1201) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತೀಯ ವೈದ್ಯ ಪದ್ಧತಿ ಇಲಾಖೆಯ ಕೇಂದ್ರೀಯ ಔಷಧಿಗಾರಕ್ಕೆ ಕಚ್ಚಾ ವಸ್ತುಗಳನ್ನು ಪಡೆಯುವಾಗ ಉನ್ನತ ಸಮಿತಿಯ ವರದಿಯಲ್ಲಿರುವ ಅಂಶಗಳನ್ನು ಚಾಚು ತಪ್ಪದೆ ಪಾಲಿಸಲಾಗುತ್ತದೆಯೆ; (ವಿವರ ನೀಡುವುದು).

ಆ) ಉನ್ನತ ಮಟ್ಟದ ಸಮಿತಿಯಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು

ಇ) ಕಚ್ಚಾವಸ್ತು ಟೆಂಡರ್‌ನಲ್ಲಿ ಮೋಸ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಹೌದು- ಈ ಹಿಂದೆ ಉನ್ನತಾಧಿಕಾರಿ ಸಮಿತಿಯು ನೀಡಿದ ಸಲಹೆ ಮೇರೆಗೆ ಟೆಂಡರುಗಳನ್ನು ನಾಲ್ಕು ಗುಂಪುಗಳ ಬದಲಾಗಿ ಈ ಏಳು ಗುಂಪುಗಳಾಗಿ ವಿಂಗಡಿಸಿ ಟೆಂಡರುಗಳನ್ನು ಕರೆಯಲಾಗುತ್ತಿದೆ.

ಆ) ಅಧ್ಯಕ್ಷರು ಸೇರಿ ಒಟ್ಟು 9 ಜನ ಸದಸ್ಯರು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಲಾದ ಪುಸ್ತಕಗಳು.

820(1202) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ 96-97, 97-98, 98-99ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ಖರೀದಿಸಲಾದ ಪುಸ್ತಕಗಳ ಮೌಲ್ಯ ಎಷ್ಟು? (ವಿವರ ನೀಡುವುದು)

ಆ) ಖರೀದಿಸಿದ ಪ್ರತಿಗಳನ್ನೇ ಪುನಃಪುನಃ ಖರೀದಿಸಿರುವುದು ನಿಜವೇ, ಹಾಗಿದ್ದಲ್ಲಿ ಈ ರೀತಿ ಖರೀದಿಸಲಾದ ಪ್ರತಿಗಳ ಮೌಲ್ಯ ಎಷ್ಟು?

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :—

ಅ) 1996-97 - ರೂ.156.15 ಲಕ್ಷ
1997-98 - ರೂ.195.18 ಲಕ್ಷ
1998-99 - ರೂ.188.35 ಲಕ್ಷ

ಕನ್ನಡ ಪುಸ್ತಕಗಳು ಶೇ.80
ಆಂಗ್ಲ ಪುಸ್ತಕಗಳು ಶೇ.10
ಇತರೆ ಪುಸ್ತಕಗಳು ಶೇ.10

ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಭಟ್ಕಳ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಲ್ಲಿನ ಕಾರ್ಯ ನಿರ್ವಹಣಾಧಿಕಾರಿ ಹುದ್ದೆ.

821(140) ಶ್ರೀ ಶಿವಾನಂದ ನಾಯಕ್, (ಭಟ್ಕಳ):— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?